**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 24.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಪಿ ಜೆ ಎ ವಕೀಲರಿಂದಃ**

ನಾನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಆಂಗ್ಲ ಭಾಷ್ಷೆಯಲ್ಲಿದ್ದು ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತ ಹೇಗಾಯಿತು ಎಂಬುದನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ನೋಡಿರುತ್ತೇನೆ ಎನ್ನುತ್ತಾರೆ. ದಿಃ14/04/2023 ರಂದು ಘಟನೆ ನಡೆದಿರುತ್ತದೆ. ಭೀಮಪ್ಪ ಎಷ್ಟು ಓದಿದ್ದ ಎಂಬುದು ನನಗೆ ಲಕ್ಷ್ಯ ಇರುವುದಿಲ್ಲ. ನನ್ನ ಮಗನ ಜನನ ಪ್ರಮಾಣಪತ್ರ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಅರ್ಜಿಯಲ್ಲಿ ನನ್ನ ಮಗನ ವಯಸ್ಸು 22 ವರ್ಷ ಹಾಗೂ ಆತ ವಿದ್ಯೆ ಕಲಿಯುತ್ತಿದ್ದ ಮತ್ತು ಕೂಲಿ ಮಾಡುತ್ತಿದ್ದ ಎಂದು ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಯಲ್ಲಪ್ಪ ಬಸಪ್ಪ ಹರಿಜನ ಇವರು ನನ್ನ ಮೈದುನನ ಮಗ. ನನ್ನ ಮಗ ದಿಃ14/04/2023 ರಂದು ಹುಬ್ಬಳ್ಳಿಯ ಸಿ ಬಿ ಟಿಯಲ್ಲಿ ಕೆಲಸಕ್ಕೆ ಹೋಗಿದ್ದನು. ನನ್ನ ಮಗ ಚಲಾಯಿಸುತ್ತಿದ್ದ ಕೆಎ-25/ಇಹೆಚ್/1833 ರ ಮೋಟಾರ್ ಬೈಕ್ ಯಾರದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನ್ಯಾಯಾಲಯಕ್ಕೆ ನಾನು ಹಾಜರಪಡಿಸಿರುವ ದಾಖಲೆಗಳನ್ನು ಓದಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದಿರಾ ಎಂದರೆ ಇಲ್ಲ ಎನ್ನುತ್ತಾರೆ. ಫಿರ್ಯಾದು ನೀಡಿರುವ ನನ್ನ ಮೈದುನನ ಮಗ ಇವರು ಫಿರ್ಯಾದಿಯಲ್ಲಿ ನನ್ನ ಮಗ ತನ್ನ ಬೈಕನ್ನು ಕೆ ಎಸ್ ಆ್ರ್ ಟಿ ಸಿ ಬಸ್ಸನ್ನು ಓವರ್ ಟೆಕ್ ಮಾಡಿ ಅತೀ ಜೋರಾಗಿ ಓಡಿಸಿಕೊಂಡು ಬರುತ್ತಿದ್ದ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನನ್ನ ಮಗನಿಗೆ ಮದ್ಯಪಾನದ ಅಭ್ಯಾಸ ಇರಲಿಲ್ಲ. ನಿಪಿ.5 ರಲ್ಲಿ ನನ್ನ ಮಗ ಮದ್ಯಪಾನ ಮಾಡಿ ಗಾಡಿ ಚಾಲನೆ ಮಾಡುತ್ತಿದ್ದ ಎಂದು ವೈದ್ಯರು ವರದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ನನ್ನ ಮಗ ಚಲಾಯಿಸುತ್ತಿದ್ದ ಗಾಡಿಗೆ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ವಿಮೆ ಕೂಡ ಇರಲಿಲ್ಲ ಎಂದರೆ ಸಾಕ್ಷಿ ಎಲ್ಲಾ ಇತ್ತು ಎನ್ನುತ್ತಾರೆ. ನನ್ನ ಮಗನ ಗಾಡಿ ಚಾಲನಾ ಪರವಾನಿಗೆ ಹಾಗೂ ವಿಮೆಯನ್ನು ಪೊಲೀಸ್ ಠಾಣೆಗೆ ಕೊಟ್ಟು ಬಂದಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಈಗಲಾದರೂ

ಚಾಲನಾ ಪರವಾನಿಗೆ ಹಾಗೂ ವಿಮೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸುತ್ತೀರಾ ಎಂದರೆ ಸಾಕ್ಷಿ ಅದು ಎಲ್ಲಿ ಕಳೆದು ಹೋಗಿದೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗನ ಗಾಡಿ ಚಾಲನಾ ಪರವಾನಿಗೆ ಹಾಗೂ ವಿಮೆ ಎರಡೂ ಇರಲಿಲ್ಲ ಆದರೂ ಕೂಡ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಮದ್ಯಪಾನ ಮಾಡಿ ಅತೀ ಜೋರಾಗಿ ಬೈಕ್ ನ್ನು ಓಡಿಸಿಕೊಂಡು ಬಂದು ಕೆ ಎಸ್ ಆರ್ ಟಿ ಸಿ ಬಸ್ಸನ್ನು ಓವರ್ ಟೇಕ್ ಮಾಡಿ ಸ್ಕಿಡ್ ಆಗಿ ಬಿದ್ದಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಮಗನ ವಿರುದ್ಧ ಪೊಲೀಸರು ಕಲಘಟಗಿ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಅದೇನು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಘಟನೆ ನನ್ನ ಮಗನ ತಪ್ಪಿನಿಂದ ಆಗಿದ್ದು ಅದನ್ನು ಬಸ್ಸಿನ ಚಾಲಕ ವಿಡಿಯೋ ಮಾಡಿದ್ದು ಆ ಕಾರಣಕ್ಕೆ ನನ್ನ ಮೈದುನನ ಮಗ ಪಿರ್ಯಾದು ಕೊಡುವ ಸಮಯದಲ್ಲಿ ನನ್ನ ಮಗನ ತಪ್ಪಿದೆ ಎಂದು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಮಗನ ವಾಹನ ನಂ.ಕೆಎ-25/ಇಹೆಚ್-1833 ಕ್ಕೆ ವಿಮೆ ಹಾಗೂ ಚಾಲನಾ ಪರವಾನಿಗೆ ಇರಲಿಲ್ಲ ಆ ಕಾರಣಕ್ಕೆ ಕೆ ಎಸ್ ಆರ್ ಟಿ ಸಿ ಬಸ್ ನ ಮೇಲೆ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಎಚ್ಚರವಿಲ್ಲದಷ್ಟು ನಶೆಯಲ್ಲಿ ಇದ್ದ ಎಂದರೆ ಸರಿಯಲ್ಲ. ಯಲ್ಲಪ್ಪ ಬಸಪ್ಪ ಹರಿಜನ ಹಾಗೂ ನನ್ನ ಮಗನ ಮೇಲೆ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕ ದೂರು ಕೊಟ್ಟಿರುತ್ತಾರೆ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಕೆ ಎಸ್ ಆರ್ ಟಿ ಸಿ ರವರ ಯಾವುದೇ ತಪ್ಪು ಇಲ್ಲದಿದ್ದರೂ ಅವರ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರೇಶನ್ ಕಾರ್ಡ ಇರುವುದಿಲ್ಲ. ನಾವು ಸಾಕ್ಷ್ಯ ಪ್ರಮಾಣಪತ್ರದಲ್ಲಾಗಲೀ ಅರ್ಜಿಯಲ್ಲಾಗಲೀ ಎಲ್ಲಿರುತ್ತೇನೆ ಎಂಬ ನಿಖರವಾದ ವಿಳಾಸ ಬರೆದಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯನ ವಾರಸಾ ಪ್ರಮಾಣಪತ್ರ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾವು ಭೀಮಪ್ಪನ ವಾರಸುದಾರರೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಆ ಕಾರಣ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಮೃತ ಭೀಮಪ್ಪ ನನ್ನ ಮಗ ತಿಂಗಳಿಗೆ 25 ಸಾವಿರ ಗಳಿಸುತ್ತಿದ್ದ ಎಂದು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕೆಎ-25/ಇಹೆಚ್-1833 ರ ವಾಹನ ನನ್ನ ಮಗನದ್ದು. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಸದರಿ ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ದೂರು ದಾಖಲಿಸಿದ ಯಲ್ಲಪ್ಪ ಬಸಪ್ಪ ಹರಿಜನ ಇವರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಆತ ಸುಳ್ಳು ಹೇಳುತ್ತಾನೆ ಎನ್ನುತ್ತಾರೆ. ನನ್ನ ಮಗನ 25 ಸಾವಿರ ದುಡಿಯುತ್ತಿದ್ದ

ಹಾಗೂ ಕೂಲಿ ಮಾಡುತ್ತಿದ್ದ ಎಂದು ನಾನು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣಪತ್ರದ 5 ನೇ ಖಂಡಿಕೆಯಲ್ಲಿ ಬರೆಸಿರುವ ಎಲ್ಲಾ ವಿಚಾರಗಳು ಸುಳ್ಳಿದೆ ಎಂದರೆ ಸರಿಯಲ್ಲ. ನಾನು ಕೇಳಿರುವಂತಹ ಪರಿಹಾರವನ್ನು ಕೊಡಲು ಎದುರುದಾರರು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಕೇಸ್ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**